**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 32/2022**

**ಚಾ.ಸಾ. :-2**
**ಪ್ರಾ.ಸಾ. :-2**

| | |
|---|---|
| ಹೆಸರು | : ನವೀನ್ ಕುಮಾರ್ |
| ತಂದೆಯ ಹೆಸರು | : ಶಿವಲಿಂಗಯ್ಯ |
| ವಯಸ್ಸು | : 36 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಬಾಬುರಾಯನಕೊಪ್ಪಲು |

---

**ಪ್ರಮಾಣೀಕರಿಸಲಾದ ದಿನಾಂಕಃ- 05.01.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಚಾ.ಸಾ-1 ಪರಿಚಯ. ದಿನಾಂಕಃ 04.06.2022 ರಂದು ಬೆಳಿಗ್ಗೆ ಸುಮಾರು 9.50 ರ ಸಮಯದಲ್ಲಿ ನಾನು ಬಾಬುರಾಯನಕೊಪ್ಪಲಿನಿಂದ ಮೈಸೂರಿಗೆ ಹೋಗಲು ಆರ್.ಎಂ.ಸಿ.ಚೆಕ್ ಪೋಸ್ಟ್ ಬಳಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ನನ್ನ ಮುಂದೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದವರು ಮುಖ್ಯ ರಸ್ತೆಯಿಂದ ಬಲಭಾಗಕ್ಕೆ ತಿರುವು ತೆಗೆದುಕೊಳ್ಳುತ್ತಿದ್ದರು. ಆ ಸಮಯದಲ್ಲಿ ಮೈಸೂರಿನಿಂದ ಬರುತ್ತಿದ್ದ KSRTC ಬಸ್ ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ. ಸದರಿ ಬಸ್ ಅತಿವೇಗವಾಗಿ ಬರುತ್ತಿತ್ತು. ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾನು ಹತ್ತಿರ ಹೋಗಿ ನೋಡಿದಾಗ ಅಪಘಾತಕ್ಕೊಳಗಾದ ವ್ಯಕ್ತಿಯು ಚಾ.ಸಾ-1 ರವರ ಮಾವ ಎಂದು ಗೊತ್ತಾಗಿರುತ್ತದೆ, ಅವರು ನನಗೆ ಪರಿಚಯವಿದ್ದರು. ಸಾರ್ವಜನಿಕರು ಸೇರಿಕೊಂಡು ಅವರನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕಳುಹಿಸಿರುತ್ತಾರೆ. ಅಪಘಾತದ ಬಗ್ಗೆ ಚಾ.ಸಾ-1 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಚಾ.ಸಾ-1 ರವರ ಮಾವ ನನಗೆ ತುಂಬಾ ವರ್ಷಗಳಿಂದ ಪರಿಚಯವಿದ್ದರು. ಬಾಬುರಾಯನಕೊಪ್ಪಲಿನಿಂದ ಶ್ರೀರಂಗಪಟ್ಟಣಕ್ಕೆ ಹೋಗಲು ಬಸ್ ನಿಲ್ದಾಣದ ಬಳಿ ಒಂದು ತಿರುವು ಇರುತ್ತದೆ ಎಂದರೆ ಸರಿ. ಆ ದಿನ ಮೃತ ಮೋಟೇಗೌಡರು ಬಸ್ ನಿಲ್ದಾಣದ ಬಳಿ ತಿರುವು ತೆಗೆದುಕೊಳ್ಳದೇ ಆರ್.ಎಂ.ಸಿ.ಚೆಕ್ ಪೋಸ್ಟ್ ಬಳಿ ಏಕೆ ತಿರುವು ತೆಗೆದುಕೊಂಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ, ಆದರೆ ಆ ದಿನ ಗಲಾಟೆ ನಡೆಯುತ್ತಿತ್ತು, ಟ್ರಾಫಿಕ್ ಇತ್ತು ಎನ್ನುತ್ತಾರೆ. ಆ ಬಗ್ಗೆ ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ಸದರಿ ದ್ವಿಚಕ್ರ ವಾಹನ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ದ್ವಿಚಕ್ರ ವಾಹನ ಅಂಗವಿಕಲರು ಚಾಲನೆ ಮಾಡುವ ವಾಹನ ಎಂದರೆ ಗೊತ್ತಿಲ್ಲ. ನಾನು ಆ ದಿನ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಹೋಗುತ್ತಿದ್ದೆ. ನಾನು ಅಪಘಾತವನ್ನು ನೇರವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಮೋಟೋಗೌಡರು ಸಹ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಹೋಗುತ್ತಿದ್ದರು. ಇದೇ ಆಸ್ಪತ್ರೆಗೆ ಅವರನ್ನು ದಾಖಲು ಮಾಡಬೇಕೆಂದು ಯಾರೂ ನಮಗೆ ಮಾಹಿತಿ ನೀಡಿರುವುದಿಲ್ಲ. ಚಾ.ಸಾ-1 ನನ್ನ ಸ್ನೇಹಿತರು. ನಾನು ಮತ್ತು ಚಾ.ಸಾ-1 ರವರು ಯಾವುದೇ ಕೆಲಸವನ್ನು ಒಟ್ಟಿಗೆ ಸೇರಿಕೊಂಡು ಮಾಡುತ್ತೇವೆ ಎಂದರೆ ಸರಿ. ಚಾ.ಸಾ-1 ರವರ ಮಾತಿನಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರಿಗೆ ವಾಹನವನ್ನು ಚಾಲನೆ ಮಾಡಲು ಬರುತ್ತಿರಲಿಲ್ಲ ಹಾಗೂ ಅವರ ತಪ್ಪಿನಿಂದ ಅಪಘಾತವಾಗಿದ್ದರೂ ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**